# ಬಯಕೆ ತೋಟದ ಬೇಲಿಯೊಳಗೆ ಕರಣ ಗಣದೀ ರಿಂಗಣ...

ತಮ್ಮ ತಂದೆ ಪಾಲ್‌ನೊಂದಿಗೆ ಕ್ರಿಸ್‌ಮಸ್ ಆಚರಣೆಗಾಗಿ ಮಕ್ಕಳಾದ ಲೂಸಿ ಮತ್ತು ಗ್ರೇಸಿ ಗ್ಲಾಸ್ಗೋಗೆ ಬಂದು ಹಬ್ಬದ ಸಂಭ್ರಮ ಆರಂಭವಾಯಿತು. ಪಾಲ್‌ನ ಅಮ್ಮ 'ಟ್ರೀ'ಯನ್ನು ಸಂತಸದಿಂದ ನೋಡುತ್ತಾ ಹೇಳಿದಳು, 'ಕ್ರಿಸ್‌ಮಸ್ ಟ್ರೀ ಎಷ್ಟು ಹೆಚ್ಚು ಶೃಂಗಾರಗೊಳ್ಳುವುದೋ, ಪರಿವಾರದ ಗೌರವ ಸಹ ಅಷ್ಟೇ ಹೆಚ್ಚುತ್ತದೆ'.

ನಾವು ನೀನಾ ಬರುವುದಕ್ಕೆ ಮೊದಲು ಕ್ರಿಸ್‌ಮಸ್‌ಗೆ ಸಿದ್ಧತೆಗಳನ್ನೆಲ್ಲಾ ಮಾಡಿದೆವು. ಬಾಗಿಲುಗಳ ಮೇಲೆ 'ಕ್ರಿಸ್‌ಮಸ್ ಆಗಮನದ ಹಾರ'ಗಳನ್ನು ತೂಗು ಹಾಕಿದೆವು. ಉಡುಗೊರೆಗಳನ್ನು ಕೊಂಡು, ಅವುಗಳನ್ನು ಪ್ಯಾಕ್ ಮಾಡಿ ಕ್ರಿಸ್‌ಮಸ್ ಮರದ ಕೆಳಗಿಟ್ಟೆವು. ಮನೆಯ ಶಾಂತಿಪೂರ್ಣ ವಾತಾವರಣದಲ್ಲಿ ಮರ ತನ್ನ ತಾಜಾ ಕಂಪನ್ನು ಪಸರಿಸುತ್ತಿತ್ತು; ಇದು ತುಂಬಾ ಪ್ರಿಯವೆನಿಸುತ್ತಿತ್ತು.

ಲೂಸಿ ಮತ್ತು ಗ್ರೇಸಿ ಮನೆಯಲ್ಲಿ ಅಲ್ಲಲ್ಲಿ ಸ್ಟಾಕಿಂಗ್ಸ್, ಉಣ್ಣೆಯ ಕಾಲುಚೀಲಗಳನ್ನು ನೇತು ಹಾಕಿದ್ದರು, ಸಾಂತಾ ಕ್ಲಾಜ್ ಬಂದು ಅವುಗಳಲ್ಲಿ ಉಡುಗೊರೆಗಳನ್ನು ಹಾಕುತ್ತಾರೆ ಎಂಬುದು ಇದರ ಆಶಯವಾಗಿತ್ತು. ಮಕ್ಕಳು ಚಿಕ್ಕವರಾಗಿದ್ದಾಗ, ಅವರ ತಂದೆ–ತಾಯಿ ಯಾರಿಗೂ ತಿಳಿಯದಂತೆ ಸ್ಟಾಕಿಂಗ್ಸ್‌ಗಳನ್ನು ಉಡುಗೊರೆಗಳಿಂದ ತುಂಬುತ್ತಾರೆ ಎಂಬ ವಿಷಯ ಅವರಿಗೆ ತಿಳಿದಿರುವುದಿಲ್ಲ. ಯಾವ ಸಾಂತಾ ಕ್ಲಾಜ್ ಸಹ ಬರುವುದಿಲ್ಲವೆಂಬ ವಿಷಯ ತಿಳಿದಾಗ ಅವರಿಗೆ ನಿರಾಶೆಯಾಗುತ್ತದೆ.

ಕ್ರಿಸ್‌ಮಸ್‌ನ ಹಿಂದಿನ ಸಂಜೆ, ಇಪ್ಪತ್ತೈದನೆಯ ದಿನಾಂಕದಂದು ಬಿಡುವೇ ಇರುವುದಿಲ್ಲ. ನಾವು ಬೆಳಿಗ್ಗೆ ಚರ್ಚ್‌ಗೆ ಹೋದೆವು. ನಾನು ಬಾಲ್ಯದಿಂದಲೂ ಚರ್ಚ್‌ಗೆ ಬರುತ್ತಿದ್ದೇನೆ. ಛಾವಣಿಯಲ್ಲಿರುವ ಏಸುಕ್ರಿಸ್ತರ ಕರುಣಾಮಯಿ ಚಿತ್ರವನ್ನು ನೋಡಿದಾಗ, ದಯಾಮಯಿಯಾದ ಅವರು ಮೇಲಿನಿಂದ ನಮ್ಮನ್ನು ನೋಡುತ್ತಿದ್ದಾರೆ ಎಂದು ಅನ್ನಿಸುತ್ತದೆ.

ಎಲ್ಲಾ ಸೇವೆಗಳು ಸಹ ಏಸುಕ್ರಿಸ್ತರ ಜನ್ಮೋತ್ಸವಕ್ಕೆ ಸಂಬಂಧಿಸಿವೆ. ಏಸುಕ್ರಿಸ್ತರ ಜನ್ಮದ ನೋಟಗಳು, ಬೇಬಿ ಯೇಶು, ಸೇಂಟ್ ನಿಕೋಲಸ್, ಸಾಂತಾ ಕ್ಲಾಜ್ ಮತ್ತು ಇತರ ಕ್ರಿಸ್‌ಮಸ್‌ರ ಕಥೆಗಳು, ಏಸುಕ್ರಿಸ್ತರ ಬಲಿದಾನ, ಕ್ರಾಸ್ ಆಗಿ ಚರ್ಚ್ ಮೇಲೇರಿದ್ದು... ಕ್ರಿಸ್‌ಮಸ್ ಹಾಡು–ಸಂಗೀತ, ವೃಂದಗಾನ, ಕೇಕ್, ಜ್ಯೂಸ್... ಪ್ರತಿಯೊಬ್ಬರೂ ಸಂತಸದಲ್ಲಿ ತೇಲಾಡುತ್ತಾರೆ.

ಚರ್ಚ್‌ನಿಂದ ಬಂದ ನಂತರ ನಾನು, ಲೂಸಿ ಮತ್ತು ಗ್ರೇಸಿ ಅಮ್ಮನೊಂದಿಗೆ ಪಾರಂಪರಿಕ ಕ್ರಿಸ್‌ಮಸ್ ಭೋಜನವನ್ನು ತಯಾರಿಸುವಲ್ಲಿ ತೊಡಗಿದೆವು. ನಾವು ಸ್ಟಾರ್ಟರ್‌ನಲ್ಲಿ ಸ್ಕಾಚ್ ರಸಮ್, ಸ್ಮೋಕ್ಡ್ ಸೈಲಮನ್ (ಮೀನು) ತಯಾರಿಸಿದೆವು. ಮೇನ್ ಕೋರ್ಸ್‌ನಲ್ಲಿ ಹುರಿದ ಟರ್ಕಿ, ಹುರಿದ ಆಲೂ, ನೀರುಳ್ಳಿ, ಶಿಪ್ಪೋಲಾತಾ ಸಾಸ್, ಕ್ಯಾರೆಟ್, ಮೊಳಕೆ ಕಾಳುಗಳು, ಬೇಕನ್ ರೋಲ್, ಡೆಸರ್ಟ್‌ನಲ್ಲಿ ಕ್ರಿಸ್‌ಮಸ್ ಹಲ್ವಾ, ಕಸ್ಟರ್ಡ್ ಮತ್ತು ಫ್ರೆಶ್ ಕ್ರೀಮ್ – ಈ ಎಲ್ಲವೂ ಇದ್ದವು.

ಲೂಸಿ ಮತ್ತು ಗ್ರೇಸಿ ಇಬ್ಬರು ಒಂದು ಗ್ಲಾಸಿನಲ್ಲಿ ಹಾಲು ತುಂಬಿ ಕೀಮಾದೊಂದಿಗೆ ಸಾಂತಾ ಕ್ಲಾಜನಿಗಾಗಿ ಹೊರ ಅಂಗಳದಲ್ಲಿಟ್ಟರು. ಅಂಧಕಾರದ ಆಗಸದಿಂದ ತನ್ನ ಚಕ್ರವಿಲ್ಲದ ವಾಹನದಲ್ಲಿ ಬರುವ ಕೆಂಪು ಮೂಗಿನ ಜಿಂಕೆ ರೂಡೋಲ್ಫ್‌ಗೆ ಕ್ಯಾರೆಟನ್ನು ಹೊರಗಿಡಲಾಯಿತು. (ಇದೊಂದು ಪರಂಪರೆಯಾಗಿದ್ದು, ಇದನ್ನು ನಾವು ನಿಷ್ಠೆಯಿಂದ ಆಚರಿಸುತ್ತೇವೆ; ಆದರೆ ಸಾಂತಾ ಹಾಲು ಕುಡಿಯಲು ಬರುವುದಿಲ್ಲ, ಜಿಂಕೆ ಆಗಸದಿಂದ ಇಳಿದು ಕ್ಯಾರೆಟ್ ತಿನ್ನಲು ಬರುವುದಿಲ್ಲ. ಬೆಳಿಗ್ಗೆ ಹಾಲು ಮತ್ತು ಕ್ಯಾರೆಟ್ ಇಟ್ಟಿರುವಂತೆಯೇ ಇರುತ್ತದೆ. ಅದರ ಮೇಲೆ ತಣ್ಣನೆಯ ಹಿಮ ಮುಚ್ಚಿರುತ್ತದೆ). ಮೇಣದ ಬತ್ತಿಗಳನ್ನು ನೀನಾ ಬಂದಾಗ ಉರಿಸಲು ಬಿಟ್ಟಿದ್ದೆವು.

ನನ್ನಲ್ಲಿ ಹುಣ್ಣಿಮೆಯ ರಾತ್ರಿ ಉಲ್ಲಾಸವನ್ನು ತುಂಬುತ್ತದೆ. ಅಂದು ಶಿಶಿರ ಪೂರ್ಣಿಮೆಯ ರಾತ್ರಿಯಾಗಿತ್ತು. ಅದು ಉನ್ಮಾದ, ಅರಳಿದ ಹಾಗೂ



